

ಅವನ ವಿದ್ವತ್ತಿಗೆ ಮಾರು ಹೋಗದವರೇ ವಿರಳ ಎಂದಿರುವಾಗ ಶೋಭಾ ಮಾತ್ರ ಅವನ ಬಲೆಗೆ ಬೀಳದೆ ತಪ್ಪಿಸಿಕೊಳ್ಳುತ್ತಿದ್ದಳು. ಅಕ್ಕರೆಯಿಂದ ಮಾತನಾಡಿಸುವಂತೆ ಕಾಣುವ ಯಾವ ಗಂಡಸರನ್ನೂ ಅವಳು ಹತ್ತಿರಕ್ಕೂ ಬಿಟ್ಟುಕೊಳ್ಳುತ್ತಿರಲಿಲ್ಲ.

ದಾರಿಯಲ್ಲಿ ನಡೆಯುವಾಗ ಹೆಣ್ಣಿನ ದೇಹವನ್ನು ಮುಟ್ಟಲು ಹವಣಿಸುವ ಗಂಡಸರನ್ನು ಥರಗುಟ್ಟಿಸಿ ಓಡಿಸಿದ್ದಾಳೆ. ಒಮ್ಮೆ ಹೀಗೆ ಸದಾ ಜನಜಂಗುಳಿಯಿಂದ ತುಂಬಿ ತುಳುಕುವ ಬಟ್ಟೆಯಂಗಡಿ ಬೀದಿಯೊಂದರಲ್ಲಿ ಹೋಗುತ್ತಿರುವಾಗ ಅವಳ ಹಿಂದೆ ಒಬ್ಬಾತ ನಡೆದು ಬರುತ್ತಿದ್ದ. ಕೈ ಬೀಸಿ ನಡೆಯುವ ಅಭ್ಯಾಸವಿರುವ ಶೋಭಾ ಅಂದು ಚಣ ಪತರುಗುಟ್ಟಿದ್ದಳು. ಹಿಂದೆ ಬರುತ್ತಿದ್ದ ವ್ಯಕ್ತಿಯ ತೊಡೆಗಳ ಮಧ್ಯಕ್ಕೆ ಅವಳ ಕೈ ತಾಕಿತ್ತು. ಅದೇ ಮೊದಲು, ಗಂಡಸಿನ ಮರ್ಮಾಂಗವನ್ನು ಮುಟ್ಟಿದ್ದು. ಎದೆ ಸಿಡಿದಂತಾಗಿ ಹಾಗೇ ನಿಂತಿದ್ದಳು. ಅಕಸ್ಮತ್ತಾಗಿ ಆತನಿಗೆ ತಾಕಿರಬೇಕೆಂದುಕೊಂಡವಳು ಕೈ ಬೀಸಿ ನಡೆಯುವ ತನ್ನ ಅಭ್ಯಾಸವನ್ನು ಚೂರು ಬದಲಾಯಿಸಿಕೊಂಡಿದ್ದಳು. ಆದರೆ ಕೆಲ ದಿನಗಳ ನಂತರ ಮತ್ತೆ ಅದೇ ತೆರನಾದ ಘಟನೆ ಸಂಭವಿಸಿದಾಗ ಇದು ಅಕಸ್ಮತ್ತಾಗಿ ನಡೆಯುವ ಸಂಭವವಲ್ಲ, ಕೆಲವು ಗಂಡಸರು ಇದಕ್ಕೆಂದೇ ಅಲೆಯುತ್ತಾರೆಂದು ಅರಿತಳು. ಹಾಗೆ ಅರಿತ ಮರುಕ್ಷಣವೇ ಮುಟ್ಟಿಸಿಕೊಂಡು ಸುಖಿಸಲು ಹಾತೊರೆಯುತ್ತಾ ಹಿಂದೆ ಬರುತ್ತಿದ್ದ ವ್ಯಕ್ತಿಯನ್ನು ಕಡೆಗಣ್ಣಲ್ಲಿ ನೋಡಿದಳು. ಕೈ ಬೀಸುತ್ತಾ ನಿಧಾನಕ್ಕೆ ನಡೆದು ಆತ ಹತ್ತಿರ ಬಂದದ್ದೇ ಅಂಗೈಯನ್ನು ಮುಷ್ಟಿಯಿಡಿದು ತನ್ನ ತೋಳುಗಳ ಶಕ್ತಿಯನ್ನೆಲ್ಲ ಬಳಸಿ ಬಲಗೈಯನ್ನು ಹಿಮ್ಮುಖವಾಗಿ ಜೋರಾಗಿ ಬೀಸಿದಳು; ಆತನ ಬೀಜಗಳು ನಜ್ಜುಗುಜ್ಜಾಗುವಂತೆ ಗುದ್ದಿದ್ದಳು. ಆತ ಕುಸಿದುಬಿದ್ದುದನ್ನು, ಜನ ಆತನ ಸುತ್ತ ಸೇರಿದ್ದನ್ನು ನೋಡಿ ಒಳಗೊಳಗೇ ಗಹಗಹಿಸಿ ಸರ್ರನೆ ಅಲ್ಲಿಂದ ಹೊರಟು ಹೋಗಿದ್ದಳು.

ಇಷ್ಟು ಮಾತ್ರವಲ್ಲದೆ ಗಂಡು ದರ್ಪದಿಂದ ವರ್ತಿಸುವವರನ್ನು ಕಂಡರೆ ಕುದಿಯುತ್ತಾ ಅವರ ಸೊಕ್ಕನ್ನು ಮುರಿಯುವ ಅವಕಾಶಕ್ಕಾಗಿ ಕಾಯುತ್ತಿದ್ದಳು. ಪುರುಷಾಧಿಕಾರಗಳನ್ನು ಹೊತ್ತು ಮೆರೆಯುವ ಸಿನಿಮಾಗಳ ವಿರುದ್ಧ ಆತ್ಮೀಯರೊಂದಿಗೆ ಸೆಟೆದು ನಿಲ್ಲುತ್ತಿದ್ದಳು. ಈ ಎಲ್ಲಾ ಕಾರಣಗಳಿಂದಾಗಿ ಇವಳನ್ನು ಮದುವೆಗೆ ಒಪ್ಪಿಸುವ ಹಾದಿಗಳೇ ಗೊತ್ತಾಗದೇ ಇವಳ ಹೆತ್ತವರು ಅಸಹಾಯಕರಾಗಿದ್ದರು. ಅವಳಿಗೆ ಸರಿಯೆನ್ನಿಸುವ ದಿನ ಮದುವೆಯಾಗಲಿ ಎಂದು ಕೈಚೆಲ್ಲಿದ್ದ ಅವರನ್ನು ಖುಷಿಪಡಿಸುವಂತಹ ಒಂದು ಘಟನೆ ನಡೆಯಿತು. ಅವಳು ಫಾರಿನ್‌ಗೆ ಹೋಗುತ್ತೇನೆಂದು ಹೇಳಿದಾಗ ಒಳಗೊಳಗೆ ಸಂತಸಗೊಂಡರೂ ತೋರಿಸಿಕೊಳ್ಳದೆ ಅವರುಗಳು ತಕ್ಷಣ ಒಪ್ಪಿಗೆ ಸೂಚಿಸಿರಲಿಲ್ಲ. ಅಲ್ಲಿಗೆ ಹೋದರಾದರೂ ಬದಲಾಗಬಹುದು, ಯಾವ ಹುಡುಗನನ್ನಾದರೂ ಇವಳು ಪ್ರೀತಿಸಿ ಮದುವೆಯಾಗಬಹುದೇನೊ ಎಂಬ ಯೋಚನೆಯಲ್ಲಿ ಅವರುಗಳಿದ್ದರೆ ಶೋಭಾಳಿಗೆ ಬೇರೆಯದೇ ಆದ ಕಾರಣಗಳಿದ್ದವು. ಹೈದ್ರಾಬಾದ್‌ನ ಜುಬಿಲಿ ಹಿಲ್ಸ್‌ನಲ್ಲಿದ್ದ ಓವರ್‌ಸೀಸ್ ಜಾಬ್ ಏಜೆನ್ಸಿ ಒಂದರ ಮೂಲಕ ಮಾಲ್ಡೀವ್ಸ್ ದೇಶದ ದ್ವೀಪವೊಂದರ ಶಾಲೆಯಲ್ಲಿ ಕೆಲಸಕ್ಕೆ ಸೇರಿದ್ದಳು. ಮೌನಿಯಾಗಿದ್ದ ಶೋಭಾ ಉರಿವ ಬೆಂಕಿಯಾಗಿ ದ್ವೀಪಗಳ ರಾಷ್ಟ್ರವಾದ ಮಾಲ್ಡೀವ್ಸ್ ಸೇರಿದ್ದಳು.

ರಾಜಧಾನಿ ಮಾಲೆಗೆ ಸಮೀಪದ ಶಾಲೆಯೊಂದರಲ್ಲಿ ಕೆಲಸ ಮಾಡುತ್ತಿರುವ ಅವಳು ಆರಂಭದಲ್ಲಿ ಮಾಲೆಯಲ್ಲೇ ಉಳಿದುಕೊಂಡು ದಿನವೂ ಒಂದು ಗಂಟೆ ಹಡಗಿನಲ್ಲಿ ಪ್ರಯಾಣ ಬೆಳೆಸಿ ಶಾಲೆಗೆ ಹೋಗುತ್ತಿದ್ದಳು. ಮೊದಲ ವರ್ಷದ ವೆಕೇಷನ್ ಮುಗಿಸಿ ಭಾರತದಿಂದ ಬಂದ ನಂತರ ಆ ದ್ವೀಪದಲ್ಲೇ ಮನೆ ಹುಡುಕಿ ಅಲ್ಲೇ ವಾಸ ಮಾಡಲು ಶುರು ಮಾಡಿದ್ದಳು. ಸುತ್ತಲೂ ತೆಂಗಿನ ಮರಗಳಿಂದ ತುಂಬಿಕೊಂಡಿದ್ದ ಆ ದ್ವೀಪ ವಿಸ್ತೀರ್ಣದಲ್ಲಿ ಕಿರಿದು. ಸುತ್ತಲೂ ಕಡಲು. ಒಮ್ಮೊಮ್ಮೆ ಅಲೆಯ ಸದ್ದು ಕಿವಿಗಪ್ಪಳಿಸಿದಂತೆ ಅವಳು ಬೆಚ್ಚಿ ಬಿದ್ದದ್ದೂ ಇದೆ. ಧೋ ಎಂದು ಸುರಿಯುವ ಮಳೆಯನ್ನೂ ಲೆಕ್ಕಿಸದೆ ಎಲ್ಲರೂ ಇಲ್ಲಿ ಕೆಲಸಕ್ಕೆ ಹೋಗುವುದನ್ನು ನೋಡಿ ಆರಂಭದಲ್ಲಿ ಬೆವೆತುಹೋಗಿದ್ದ ಶೋಭಾ ಬರುಬರುತ್ತಾ ಹೊಂದಿಕೊಂಡು ಸದಾ ಕೊಡೆಯೊಂದನ್ನು ಹಿಡಿದು ಶಾಲೆಗೆ ಹೋಗತೊಡಗಿದಳು. ಇಲ್ಲಿಯ ಕಡಲ ತಡಿಗೆ ಹೋಗಿ ಒಬ್ಬಳೇ ಕೂರಬೇಕೆಂದು ಅವಳು ತೀವ್ರವಾಗಿ ಬಯಸಿದ್ದಳು ಕೂಡ; ಆದರೆ ಅದು ಬೇರೆ ತೆರನಾದ ಸುದ್ದಿಗಳಿಗೆ ಇಲ್ಲಿ ಆಹಾರವಾಗಿಬಿಡಬಹುದಾದಂತಹ ಅಪಾಯವಿದೆ ಎಂದೆನಿಸಿ ಆ ಯೋಚನೆಯನ್ನೇ ಕೈ ಬಿಟ್ಟಿದ್ದಳು. ದೂರದಿಂದಲೇ ಕಡಲ ನೋಡಿ ಕಣ್ತುಂಬಿಸಿಕೊಳ್ಳುತ್ತಿದ್ದಳು. ಈ ಜಗತ್ತೇ ಗಂಡಸರಿಗೆ ಸೇರಿದ್ದು ಎಂದು ಕುದಿಯುತ್ತಿದ್ದಳು. ಹೀಗೆ ದಿನಗಳು ಕಳೆದಂತೆ ಆ ದ್ವೀಪ ಇವಳ ಅಚ್ಚುಮೆಚ್ಚಿನ ತಾಣವಾಗಿ ಬದಲಾಯಿತು.

ಶಾಲೆಯಲ್ಲಿ ಅವಳೊಂದಿಗೆ ಕೆಲಸ ಮಾಡುವ ಭಾರತೀಯ ಸಹೋದ್ಯೋಗಿಗಳು ಮದುವೆಯ ವಿಚಾರ ಎತ್ತಿ ಕಿರಿಕಿರಿಯುಂಟು ಮಾಡುವ ಯತ್ನಗಳನ್ನು ಆರಂಭದಲ್ಲೇ ಚಿವುಟಿ ಹಾಕಿದ್ದಳು. ಸದಾ ಗುರ್ರೆಂದು ಬುಸುಗುಡುವ ಟಗರಾಗಿ ಅಲ್ಲಿದ್ದವರನ್ನು ಎದುರುಗೊಳ್ಳುತ್ತಿದ್ದಳು. ಶಾಲೆಯ ಸಿಬ್ಬಂದಿಗಳ ನಡುವೆ ಇದ್ದ ಗ್ರೂಪಿಸಂಗೂ ಸೇರದೆ ಸದಾ ಒಂಟಿಯಾಗಿಯೇ ಇರಬಯಸುವ ಇವಳು ಎಲ್ಲರಿಗೂ ಬಿಡಿಸದ ಒಗಟಾಗಿ ಅಲ್ಲಿ ಉಳಿದಿದ್ದಳು. ಶಾಲೆಯ ಯಾವುದೇ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಹೋಗುತ್ತಿರಲಿಲ್ಲ. ಶಾಸ್ತ್ರೀಯ ಸಂಗೀತದ ಆಸಕ್ತಿಯನ್ನು ಅವಳು ಹೈದ್ರಾಬಾದಿನಲ್ಲಿರುವಾಗಲೇ ಕೈ ಬಿಟ್ಟಿದ್ದಳು. ಅದಕ್ಕೊಂದು ಬಲವಾದ ಕಾರಣವೂ ಇತ್ತು.